

ಆಕಾಶಕ್ಕೆ ಜಿಗಿದಂಥ ಅನುಭವ ನೀಡುವ 'ಸ್ಕೈ ಬ್ರಿಜ್'

ಸಸ್ಯಾಹಾರಿಗಳಿಗೆ ಹೋಟೆಲುಗಳು ತುಂಬಾ ಕಡಿಮೆ. ಮರುದಿನ ನಮಗೆ ಮುಖ್ಯವಾಗಿ ಕಿಲಿಂ ಜಿಯೊಫಾರೆಸ್ಟ್ ಪಾರ್ಕ್‌ಗೆ (KILIM GEOFOREST PARK) ಹೋಗುವುದಿತ್ತು ಮತ್ತು ಕೇಬಲ್ ಕಾರಿನಲ್ಲಿ ಹೋಗಿ ಸ್ಕೈ ಬ್ರಿಜ್ ನೋಡಬೇಕಿತ್ತು. ಕಿಲಿಂ ಬೋಟಿನಲ್ಲೇ ಹೋಗಿ ನೋಡಬೇಕಾದ ಸ್ಥಳ. ನಮ್ಮನ್ನು ಪ್ರತ್ಯೇಕ ಬೋಟಿನಲ್ಲಿ ಕರೆದುಕೊಂಡು ಹೋದರು. ಮೊದಲಿಗೆ ಹೋಗಿದ್ದು 'ಬಾವಲಿ ಗುಹೆ'ಗೆ. ಬೋಟಿನಿಂದ ಇಳಿದು ಒಳಗೆ ನಡೆದು ಹೋಗಬೇಕು. ಇದೆಲ್ಲ ನೈಸರ್ಗಿಕ ಗುಹೆಗಳು. ಒಳಗೆ ಹೋಗುತ್ತಿದ್ದಂತೆ ಗುಹೆಯ ಮೇಲ್ಛಾವಣಿಗೆ ನೇತುಬಿದ್ದಿರುವ ಬಾವಲಿಗಳನ್ನು ನೋಡಬಹುದು. ಇಲ್ಲಿ ಬ್ಯಾಟರಿ ಹಿಡಿದು ಹೋಗುವುದು ಅವಶ್ಯ.

ಬೋಟಿನಲ್ಲಿ ನಮ್ಮ ಮುಂದಿನ ಪ್ರಯಾಣ ಕ್ರೊಕೊಡೈಲ್ ಮೌತ್ ಕಡೆಗೆ, ಅದು 5 ನಿಮಿಷದ ಹಾದಿ. ಅದೊಂದು ಮೊಸಳೆಯ ಬಾಯಿಯಾಕಾರದ ಗುಹೆ. ಬೋಟಿನಲ್ಲಿ ಕುಳಿತೇ ಒಳಗೆ ಹೋಗಬೇಕಿತ್ತು. ಆದರೆ ಅಂದು ನೀರಿನ ಮಟ್ಟ ಸ್ವಲ್ಪ ಹೆಚ್ಚಿದ್ದರಿಂದ ನಮ್ಮ ಬೋಟು ಗುಹೆಯ ಬಾಗಿಲಿನಲ್ಲೇ ತಡೆಯುತ್ತಿತ್ತು. ಅದನ್ನು ನೋಡುವ ಯೋಗದಿಂದ ವಂಚಿತರಾದೆವು. ಮುಂದೆ ನಮ್ಮನ್ನು ಕರೆದುಕೊಂಡು ಹೋಗಿದ್ದು ಕಿಲಿಂ ಜಿಯೊಫಾರೆಸ್ಟ್ ಪಾರ್ಕ್ ವ್ಯೂ ಪಾಯಿಂಟಿಗೆ. ಮಾರ್ಗದುದ್ದಕ್ಕೂ ಪ್ರಕೃತಿಯ ವೀಕ್ಷಣೆ ಮೋಹಕವೆನಿಸಿತು. ಕಾಂಡ್ಲಾ ಮರಗಳನ್ನು ಇಲ್ಲಿ ನೋಡಬಹುದು. ನಾಲ್ಕೂ ಕಡೆ ಹಸುರು ಮತ್ತು ಸುತ್ತಲೂ ನೀರಿನಿಂದ ತುಂಬಿರುವ ಈ ಜಾಗ ರಮಣೀಯವೆನಿಸಿತು. ಅಲ್ಲೇ ಹತ್ತಾರು ಫೋಟೊಗಳನ್ನು ಕ್ಲಿಕ್ಕಿಸಿಕೊಂಡೆವು.

ಎಲ್ಲವನ್ನೂ ನೋಡಿ ಹೊರಬಂದಾಗ ಸುಮಾರು ಮಧ್ಯಾಹ್ನ ಒಂದು ಗಂಟೆಯಾಗಿತ್ತು. ಸುತ್ತಮುತ್ತಲಿನ ಜಾಗ ನೋಡುತ್ತಾ ಸೆಲ್ಫಿ ಕ್ಲಿಕ್ಕಿಸುತ್ತಿದ್ದ ನಮಗೆ ಆಗಲೇ ಊಟದ ಸಮಯವೆಂದು ನೆನಪಿಸಿದ್ದು ಹೊಟ್ಟೆಯೇ. ಇಲ್ಲಿ ನಮ್ಮ ಸಸ್ಯಾಹಾರ ದುರ್ಲಭ ಅಂದುಕೊಳ್ಳುತ್ತಿದ್ದಂತೆ ಕಣ್ಣಿಗೆ ಕಾಣಿಸಿದ್ದು ಒಂದು ಪಾಕಿಸ್ತಾನಿ ಹೋಟೆಲ್. ನಮ್ಮದೇ ರೈಸ್ ಮೆನು ಹೇಳಿ ಊಟ ಮಾಡಿಸಿ ತಿಂದಾಯಿತು.

ನಮ್ಮ ಮುಂದಿನ ಪ್ರಯಾಣ ಲಂಕಾವಿಯ ಬಹುಮುಖ್ಯ ಆಕರ್ಷಣೆಗಳಲ್ಲೊಂದಾದ ಕೇಬಲ್ ಕಾರ್ ಮತ್ತು ಸ್ಕೈ ಬ್ರಿಜ್‌ನೆಡೆಗಾಗಿತ್ತು. ಹಾದಿಯಲ್ಲಿ ಪೆಟ್ರೋಲ್ ಹಾಕಿಸಲು ಪೆಟ್ರೋಲ್ ಬಂಕ್‌ಗೆ ಹೋದರೆ, ಅಲ್ಲಿ ಯಾರೂ ಇರಲಿಲ್ಲ. ಕೌಂಟರ್‌ನಲ್ಲಿ ಮಹಿಳೆಯೊಬ್ಬಳು ಕುಳಿತಿದ್ದಳು. ಇಲ್ಲಿನ ಹೆಚ್ಚಿನ ಅಂಗಡಿ ಅಥವಾ ಶಾಪಿಂಗ್ ಮಾಲುಗಳಲ್ಲಿ ಸಹಾಯಕ್ಕೆ ಮಹಿಳೆಯರೇ ಹೆಚ್ಚು ಕಂಡುಬಂದರು. ಇಲ್ಲಿ ಪ್ರತಿ ಲೀಟರ್ ಪೆಟ್ರೋಲ್‌ಗೆ 2 ರಿಂಗಿಟ್, ಭಾರತೀಯ ರೂಪಾಯಿಗಳಲ್ಲಿ ಸುಮಾರು 40 ರೂಪಾಯಿ. ಕೌಂಟರ್‌ನಲ್ಲಿ ದುಡ್ಡು ಕಟ್ಟಿ ಪೆಟ್ರೋಲ್ ನಾವೇ ಹಾಕಿಕೊಳ್ಳಬೇಕು.

ಸ್ಥಳಕ್ಕೆ ಹೋದಾಗ ಪಾರ್ಕಿಂಗ್ ಬಳಿ ಬರಿ ನಾಲ್ಕೈದು ಕಾರುಗಳು ಕಂಡವು. ಇವತ್ತು ರಜೆಯಿರಬಹುದೇ ಎಂಬ ಅನುಮಾನದಿಂದ ಟಿಕೆಟ್ ಕೌಂಟರ್ ಬಳಿ ತಲುಪಿದ್ದೆವು. ಅಂದು ರಂಜಾನ್ ಇದ್ದಿದ್ದರಿಂದ 5 ಗಂಟೆಗೆಲ್ಲ ಬಂದ್ ಆಗುವುದರಲ್ಲಿತ್ತು. 'ಸದ್ಯ ಸಿಕ್ಕಿತಲ್ಲ' ಎಂದು ಖುಷಿಯಲ್ಲಿ ಟಿಕೆಟ್ ಪಡೆದವರೇ ಕೇಬಲ್ ಕಾರಿನಲ್ಲಿ ಕುಳಿತೆವು. ಅದೊಂದು ಚಿಕ್ಕ ಪೋಡ್. ನಾಲ್ಕು ಜನ ಕೂರುವಷ್ಟು ಜಾಗವಿದೆ. ನಿಮಿಷಕ್ಕೊಂದು ಪೋಡ್ ಬರುತ್ತಿರುತ್ತದೆ. ನಾವು ಒಳಗೆ ಹೋದಹಾಗೆ ಬಾಗಿಲುಗಳು ಮುಚ್ಚಿಕೊಳ್ಳುತ್ತವೆ. ಇದರಲ್ಲಿ ಕುಳಿತ ನಂತರ ಮೇಲೆ ಮೇಲೆ ಕರೆದುಕೊಂಡು ಹೋಗುತ್ತದೆ.

ಹೀಗೆ ಭೂಮಿಯಿಂದ ದೂರವಾಗಿ, ಆಕಾಶಕ್ಕೆ ಹತ್ತಿರವಾಗುತ್ತಾ ಸಾಗುವುದು ಎಂಥ ಅದ್ಭುತ ಅನುಭವ! ಸುಮಾರು 15 ನಿಮಿಷದ ಈ ಪ್ರಯಾಣ 2.2 ಕಿ.ಮೀ. ದೂರವಿದ್ದು, ನೆಲಮಟ್ಟದಿಂದ 450 ಮೀಟರ್ ಮೇಲಕ್ಕೆ (ಸಮುದ್ರ ಮಟ್ಟದಿಂದ ಸುಮಾರು 708 ಮೀಟರ್ ಮೇಲಕ್ಕೆ) ಕರೆದೊಯ್ಯುತ್ತದೆ. ಮೋಡಗಳ ಮಧ್ಯೆ ಆ ಪೋಡಿನಲ್ಲಿ ಕುಳಿತು ಹಕ್ಕಿಯಾದ ಅನುಭವ ನಮ್ಮದು. ಒಮ್ಮೆಯಂತೂ ದಟ್ಟವಾದ ಮಂಜಿನಿಂದಾಗಿ ನಮ್ಮ ಹಿಂದೆ ಮತ್ತು ಮುಂದಿರುವ ಪೋಡ್‌ಗಳೂ ಕಾಣಿಸುತ್ತಿರಲಿಲ್ಲ.

ಮೇಲೆ ತಲುಪಿದ ನಂತರ ಸ್ಕೈ ಬ್ರಿಜ್ ತಲುಪಲು ಮತ್ತೆ 5 ನಿಮಿಷದ ವಾಕ್. ಹೆಸರಿಗೆ ತಕ್ಕಂತೆ ಆಕಾಶಕ್ಕೇ ಸೇತುವೆ ಎನಿಸಿದ ಜಾಗವದು. ಬೇರೆ ಜಗತ್ತಿಗೆ ಹೋದ ಅನುಭವ. ಅಲ್ಲಿಯತನಕ ಮೋಡಗಳಿಂದ ಸಂಪೂರ್ಣ ಮುಚ್ಚಿದ್ದ ಬ್ರಿಜ್, ಒಮ್ಮೆಲೇ ಮಂಜೆಲ್ಲ ಮಾಯವಾಗಿ ಸ್ಪಷ್ಟವಾಗಿ ಕಾಣಲು ಶುರುವಾಗಿತ್ತು.

ಸುತ್ತ ಹಸುರು ಹೊದ್ದ ಬೆಟ್ಟಗುಡ್ಡಗಳ ನಡುವಿನ ದೊಡ್ಡ ಕಂದಕಗಳು, ದೂರದ ಸಮುದ್ರ, ಪಕ್ಕದಲ್ಲೇ ತೇಲಾಡುವ ಮೋಡಗಳು... ಆಕಾಶದಿಂದ ಇಣುಕುತ್ತಿದ್ದೇವೇನೋ ಎಂಬಂತೆ ನಮ್ಮನ್ನು ಬೆರಗಿನ ಲೋಕಕ್ಕೆ ಪರಿಚಯ ಮಾಡಿಕೊಟ್ಟಿತ್ತು ಈ ಸುಂದರ ಸೇತುವೆ. ಈ ಬ್ರಿಜ್, ಸುಮಾರಾಗಿ ಅರೆ ವರ್ತುಲಾಕಾರದಲ್ಲಿದ್ದು 125 ಮೀಟರ್ ಉದ್ದವಿದೆ. ಅಷ್ಟು ಎತ್ತರದಲ್ಲಿ ಮಾಡಿದ ಆ ಬ್ರಿಜ್ ಮೇಲೆ ನಿಲ್ಲುವುದೇ ರೋಮಾಂಚನಕಾರಿ ಅನುಭವ.

ಪ್ರತಿಕ್ರಿಯಿಸಿ: feedback@sudha.co.in